



ಮೂಡಿರುವುದಿಲ್ಲ. ಹುಳುಗಳಂತೆ ಹರಿದು ಕೊಂಬೆ ಕಾಂಡಗಳನ್ನು ಗಟ್ಟಿ ಹಿಡಿದು ಕೂರುತ್ತವೆ. ಆಗ ಇನ್ನೊಂದು ಹಂತದ ರೂಪಾಂತರ ಕ್ರಿಯೆ ಆರಂಭ. ಹೊರ ವಾತಾವರಣಕ್ಕೆ ಹೊಂದಿಕೊಂಡು ಕಾಂಡಗಳ ರಸವನ್ನು ಹೀರಿದ ನಂತರ ಅವುಗಳ ಮೇಲ್ಮೈ ನಿಧಾನವಾಗಿ ಗಟ್ಟಿಯಾಗುತ್ತಾ ಪದರದಂತಾಗುತ್ತದೆ. ನಂತರ ಪದರದಿಂದ ಹೊರಬಂದು ರೆಕ್ಕೆಗಳನ್ನು ಬಿಚ್ಚಿದಾಗ ಬಿಳಿಯದಾದ ಪಾರದರ್ಶಕ ರೆಕ್ಕೆಗಳು ಬಲಿಯುತ್ತಾ ಹೋಗುತ್ತವೆ. ನಂತರ ಸಿಕಾಡಾಗಳು ಹಾರಲು ಆರಂಭಿಸುತ್ತವೆ. ಆದ್ದರಿಂದ ಸಿಕಾಡಾಗಳನ್ನು 'ಹವಾಮಾನ ಸೂಚಕಗಳು' ಎಂದು ಕರೆಯಲಾಗುತ್ತದೆ.

ಸಿಕಾಡಾಗಳು ಮನುಷ್ಯರ ಮೇಲೆ ಆಕ್ರಮಣ ಮಾಡುವ ಕೀಟದ ಜಾತಿಗೆ ಸೇರಿಲ್ಲವಾದರೂ ಬೆಳೆಗಳ ಮೇಲೆ ಆಕ್ರಮಣ ಮಾಡುತ್ತವೆ. ಧಾನ್ಯ, ತರಕಾರಿ, ಕಲ್ಲಂಗಡಿ ಬೆಳೆಯ ಗಿಡಗಳ ಕಾಂಡಗಳು ಮೃದು ಮತ್ತು ರಸ ಹೀರಲು ಸಿಕಾಡಗಳಿಗೆ ಸುಲಭ. ಆದ್ದರಿಂದ ಹಲವು ಬೆಳೆಗಳ ಇಳುವರಿಯನ್ನು ಕಡಿಮೆ ಮಾಡುತ್ತವೆ. ಬೇಸಿಗೆಯಲ್ಲಿ ಕೀಟಾಹಾರಿಗಳಿಗೆ ಸಿಕಾಡಗಳು ಒಳ್ಳೆಯ ಭಕ್ಷ್ಯ. ಸಿಕಾಡಾಗಳು ಒಮ್ಮೆಲೆ ಮಿಲಿಯನ್‌ಗಟ್ಟಲೆ ಭೂಮಿಯಿಂದ ಹೊರಬರುವುದರಿಂದ ಪಕ್ಷಿಗಳು, ಅಳಿಲು, ಕಪ್ಪೆಗಳು, ಹಲ್ಲಿಗಳು, ಮುಳ್ಳು ಹಂದಿಗಳು, ನರಿಗಳು ಇವುಗಳನ್ನು ಎಷ್ಟೇ ಪ್ರಮಾಣದಲ್ಲಿ ಹಿಡಿದು ತಿಂದರೂ ಅವುಗಳ ಸಂತತಿ ಅಕ್ಷಯ ಎನ್ನುವಂತೆ ಕಾಣಿಸುತ್ತದೆ. ಹೆಣ್ಣು ಸಿಕಾಡವೊಂದು 400ರಿಂದ 900 ಮೊಟ್ಟೆ ಇಡುವುದರಿಂದ ಅವುಗಳ ಸಂತತಿ ನಶಿಸುವುದೇ ಇಲ್ಲ.

ಅಮೆರಿಕದ ಜನರು ಸಿಕಾಡಾಗಳನ್ನು ಬಳಸಿ ಹಲವು ಬಗೆಯ ಆಹಾರ ತಯಾರಿಸುತ್ತಾರೆ. ಸಿಕಾಡಾಗಳನ್ನು ಫ್ರೈ, ರೋಸ್ಟ್ ಮಾಡಿ ತಿನ್ನಲಾಗುತ್ತದೆ. ಪೌಡರ್ ಮಾಡಿ ಕೆಲ ಕಾಲದವರೆಗೆ ಇಟ್ಟುಕೊಳ್ಳಲಾಗುತ್ತದೆ. ಚಾಕೊಲೆಟ್ ಪಾಸ್ತಾ, ಪಿಜ್ಜಾಗಳ ಜೊತೆ ಸೇರಿಸಿ ಅಡುಗೆ ಮಾಡಲಾಗಿದೆ. ಕೊಬ್ಬಿನಂಶ ಕಡಿಮೆಯಿದ್ದು ಪ್ರೊಟೀನ್ ಜಾಸ್ತಿ ಇರುವುದರಿಂದ ಸಿಕಾಡಾಗಳ ಖಾದ್ಯಕ್ಕೆ ಬೇಡಿಕೆಯಿದೆ.

ಗ್ರೀಕ್ ಮತ್ತು ರೋಮನ್ನರು ಸಿಕಾಡಗಳ ಬಗ್ಗೆ ಜಾಸ್ತಿಯೇ ಕುತೂಹಲಿಗಳಾಗಿದ್ದರು. ತಮ್ಮ ಆಹಾರದಲ್ಲಿ ಔಷಧವಾಗಿಯೂ ಸಿಕಾಡಾಗಳನ್ನು ಬಳಸುವ ರೂಢಿ ಅವರಿಗಿತ್ತು. ಜಾನಪದ, ಸಾಹಿತ್ಯ, ತತ್ವಜ್ಞಾನ, ಸಂಗೀತ, ಪುರಾಣದಲ್ಲಿ ಸಿಕಾಡಾಗಳ ಉಲ್ಲೇಖಗಳಿವೆ. ಪ್ರಾಚೀನ ಗ್ರೀಕ್ ನಾಣ್ಯದ ಮೇಲೆ ಹಾಡುವ ಸಿಕಾಡಾದ ಚಿತ್ರ ಇದೆ. ಫ್ರಾಂಕಿಷ್ ರಾಜ ಚೈಲ್ಡೆರಿಕ್ 1 ಅವರ ಸಮಾಧಿಯಲ್ಲಿ ಗಾರ್ನೆಟ್ ಸಿಕಾಡಾಸ್ ಹೊಂದಿರುವ ಚಿನ್ನದ ಆಭರಣಗಳು ಕಂಡುಬಂದಿವೆ. ಹೋಮರ್‌ನ ಈಲಿಯಡ್‌ನಲ್ಲಿ ಸಿಕಾಡಾಗಳ ಕುರಿತು ಬರೆಯಲಾಗಿದೆ. ಚೀನಾದ ಷಾಂಗ್ ಆಳ್ವಿಕೆ ಮನೆತನದಲ್ಲಿ ಇವುಗಳನ್ನು ಕಲೆಯಲ್ಲಿ ಬಳಸಲಾಗಿದೆ. ಗ್ರೀಕ್ ತತ್ವಜ್ಞಾನಿ ಅರಿಸ್ಟಾಟಲ್‌ನಿಗೆ ಸಿಕಾಡಾಗಳ ಖಾದ್ಯ ಬಲು ಪ್ರಿಯವಾಗಿತ್ತು. ಅರಿಸ್ಟಾಟಲ್‌ನ 'ಹಿಸ್ಟೋರಿಯಾ ಅನಿಮಲಿಯಲ್ಡ'ಲ್ಲಿ ಸಿಕಾಡಾಗಳ ವಿವರಗಳಿವೆ. ಗ್ರೀಕ್ ಜಾನಪದ, ತತ್ವಜ್ಞಾನ, ಪುರಾಣದಲ್ಲಿ ಇವು ಪುನರುತ್ಥಾನ ಮತ್ತು ಅಮರತ್ವದ ಸಂಕೇತಗಳಾಗಿವೆ. ಪ್ಲೇಟೊ ಮತ್ತು ಸಾಕ್ರೆಟಿಸ್ ಕೂಡ ಸಿಕಾಡಾಗಳನ್ನು ನಿಸರ್ಗದೇವತೆಗಳು, ಕ್ಷೇತ್ರದೇವತೆಗಳು ಎಂದು ಕರೆದಿದ್ದಾರೆ. 'ಬಲಿತ ಸಿಕಾಡಾಗಳಿಗಿಂತ ಲಾರ್ವಾ ರೂಪದಲ್ಲಿರುವ ಸಿಕಾಡಾಗಳು ತಿನ್ನಲು ರುಚಿ' ಎಂದು ಅರಿಸ್ಟಾಟಲ್ ಹೇಳಿದ್ದಾನೆ. ಹೊಟ್ಟೆ ಕೆಟ್ಟರೆ ಸಿಕಾಡಾಗಳನ್ನು ನೀರಿನಲ್ಲಿ ಬೇಯಿಸಿ ಔಷಧಿ ರೂಪದಲ್ಲಿ ಬಳಸುವ ಪದ್ಧತಿ ಕೂಡ ಇತ್ತು. ಅಮೆರಿಕಾದ ಕವಿ ಜಾನ್ ಬ್ಲೇರ್ ಸಿಕಾಡಾಗಳ ಕುರಿತು ಪದ್ಯ ಕೂಡ ಬರೆದಿದ್ದಾನೆ.

ಇಷ್ಟೆಲ್ಲ ಇತಿಹಾಸವಿರುವ ಸಿಕಾಡಗಳು ಈಗ ಅಮೆರಿಕದಲ್ಲಿ ಹಬ್ಬದ ಸಂಭ್ರಮವನ್ನು ಉಂಟುಮಾಡಿವೆ. ಹದಿನೇಳು ವರ್ಷದ 'ಹೋಮ್ ಐಸೋಲೇಷನ್' ನಂತರ ಹೊರಜಗತ್ತಿನಲ್ಲಿ ಹುಯಿಲೆಬ್ಬಿಸಿರುವ ಈ ಕೀಟಗಳನ್ನು ಈಗ ನೋಡಲು ತಪ್ಪಿಸಿಕೊಂಡರೆ ಮತ್ತೆ ಹದಿನೇಳು ವರ್ಷ ಕಾಯಲೇಬೇಕು.

ಪ್ರತಿಕ್ರಿಯಿಸಿ: feedback@sudha.co.in